ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (222) 113
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ಶ್ರೀ ಲಕ್ಷ್ಮಣ ಸಾ. ಸವದಿ)

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯ ನೆರವು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ಈ ಪೈಕಿ ಅಂತಹ ನೇಕಾರರಿಗೆ ಪಾವತಿಸಿದ ಒಟ್ಟು ಹಣ ಎಷ್ಟು?	ರಾಜ್ಯದಲ್ಲಿನ ಪಟ್ಟಣ ಸಹಕಾರ ಬ್ಯಾಂಕು/ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿ ಹಣ ಬಿಡುಗಡೆ ಮಾಡಿದ ವಿಫಲಗಳು ಈ ಕೆಳಕಂಡಂತಿವೆ. **<u>ಪಟ್ಟಣ ಸಹಕಾರ ಬ್ಯಾಂಕುಗಳು:</u>** ರಾಜ್ಯದಲ್ಲಿನ ನೇಕಾರರಿಗೆ ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ 36 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿನ 8828 ಫಲಾನುಭವಿಗಳಿಗೆ ಒಟ್ಟು ರೂ. 22,06,50,025+00 ಮಂಜೂರು ಮಾಡಿದ್ದು, ಈ ಪೈಕಿ 33 ಬ್ಯಾಂಕುಗಳಲ್ಲಿನ 6268 ಅರ್ಹ ಫಲಾನುಭವಿಗಳಿಗೆ ರೂ. 19,14,44,733=00 ಗಳನ್ನು ಸದರಿ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ. **<u>ಕೃಷಿಯೇತರ ಪತ್ತಿನ ಸಹಕಾರ ಸಂಘಗಳು:</u>** ರಾಜ್ಯದಲ್ಲಿನ ನೇಕಾರರಿಗೆ ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ 78 ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿನ 10,598 ಫಲಾನುಭವಿಗಳಿಗೆ ಒಟ್ಟು ರೂ. 15,98,14,777=00 ಮಂಜೂರು ಮಾಡಿದ್ದು, ಈ ಪೈಕಿ 77 ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ರೂ. 15,95,77,779=00 ಗಳನ್ನು ಬಿಡುಗಡೆ ಮಾಡಲಾಗಿದೆ. **<u>ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್:</u>** 18 ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ 130 ಫಲಾನುಭವಿಗಳಿಗೆ

		ರೂ. 39,98 ಲಕ್ಷ ಬಡ್ಡಿ ಮನ್ನಾ ಮೊಬಲಗು ಮಂಜೂರು ಮಾಡಲಾಗಿರುತ್ತದೆ. **<u>ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ, ಶಿರಸಿ ಉತ್ತರ ಕನ್ನಡ ಜಿಲ್ಲೆ:</u>** 184 ಫಲಾನುಭವಿಗಳಿಗೆ ರೂ. 7.27 ಲಕ್ಷ ಬಡ್ಡಿ ರಿಯಾಯಿತಿ ಮೊತ್ತವನ್ನು ಮಂಜೂರು ಮಾಡಲಾಗಿದೆ.
ಆ.	ಸದರಿ ಯೋಜನೆಯಲ್ಲಿ ಅಡಕವಾಗಿರುವ ಗ್ರಾಮೀಣ ಬ್ಯಾಂಕುಗಳು ಮತ್ತು ಕೃಷಿ ಪತ್ತಿನ ಬ್ಯಾಂಕುಗಳೆಷ್ಟು?	ಸದರಿ ಯೋಜನೆಯಲ್ಲಿ 18 ಗ್ರಾಮೀಣ ಬ್ಯಾಂಕುಗಳು ಹಾಗೂ 1 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ, ಇವೆ.
ಇ.	ಕೆಲವು ಬ್ಯಾಂಕು ಮತ್ತು ಸಂಘಗಳಿಗೆ ಸಾಲ ಮತ್ತು ಬಡ್ಡಿ ಮನ್ನಾ ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಅವುಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)	ಪ್ರಶ್ನೆ 1 ಕ್ಕೆ ನೀಡಿದ ಉತ್ತರದಲ್ಲಿ ನಮೂದಿಸಿದ ಪಟ್ಟಣ ಬ್ಯಾಂಕುಗಳು ಹಾಗೂ ಸಂಘಗಳನ್ನು ಹೊರತುಪಡಿಸಿ ಈಗ ಸಾಲ ಮತ್ತು ಬಡ್ಡಿ ಮನ್ನಾ ಮಂಜೂರಾತಿ ಕೋರಿ 1 ಬ್ಯಾಂಕ್ ಮತ್ತು 4 ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಪ್ರಸ್ತಾವಗಳನ್ನು ಸಲ್ಲಿಸಿರುತ್ತವೆ. ವಿವರಗಳು ಈ ಕೆಳಕಂಡಂತಿದೆ:– 1) ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ನಿ, ಬೆಂಗಳೂರು. ಚಿಕ್ಕಬಳ್ಳಾಪುರ ಶಾಖೆ – ರೂ. 33,530/– 2) ಸಂಗಮ ಪತ್ತಿನ ಸಹಕಾರ ಸಂಘ ನಿ, ರಾಮಪುರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ – ರೂ.32,920/– 3) ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಅರ್ಬನ್ ಕೋ–ಆಪ್, ಕ್ರೆಡಿಟ್ ಸೊಸೈಟಿ, ಬೈಲಹೊಂಗಲ, ಬೆಳಗಾಂ ಜಿಲ್ಲೆ – ರೂ.11,64,615/– 4) ಗಾಯತ್ತಿ ಅರ್ಬನ್ ಕೋ–ಆಪ್, ಕ್ರೆಡಿಟ್ ಸೊಸೈಟಿ, ಅತ್ತರಗಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ – ರೂ.10,22,016/–

		5) ಶ್ರೀ ಗಾಯತ್ರಿ ಅರ್ಬನ್ ಕೋ-ಆಪ್, ಕ್ರೆಡಿಟ್ ಸೊಸೈಟಿ ನಿ, ವಡಗಾವಿ, ಬೆಳಗಾವಿ ಜಿಲ್ಲೆ – ರೂ. 81,63,201/-
ಈ	ಈ ಯೋಜನೆಯ ಲಾಭದಿಂದ ಅನೇಕ ನೇಕಾರರು ವಂಚಿತರಾಗಿದ್ದು, ಅಂತಹವರಿಗೆ ಯಾವಾಗ ಹಣ ಪಾವತಿಸಲಾಗುವುದು? (ವಿವರ ನೀಡುವುದು)	ಪಟ್ಟಣ ಸಹಕಾರ ಬ್ಯಾಂಕುಗಳು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ನೇಕಾರಿಕೆ ಉದ್ದೇಶಕ್ಕಾಗಿ ನೀಡಿದ ಸಾಲ, ಬಡ್ಡಿ ಹಾಗು ದಂಡದಬಡ್ಡಿ ಮನ್ನಾ ಪ್ರಸ್ತಾವಗಳನ್ನು ಪರಿಶೀಲಿಸಿ ನೈಜ ನೇಕಾರರೆಂದು ದೃಢೀಕರಿಸಲ್ಪಟ್ಟ ನೇಕಾರರ ಎಲ್ಲಾ ಕ್ಲೇಮು ಬಿಲ್ಲುಗಳಿಗೆ ಸಂಬಂಧಿಸಿದ ಮೊತ್ತವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.